ಸಿ.ಸಿ.856/2021 ಪಿಡಬ್ಲ್ಯೂ-1

ದಿನಾಂಕಃ 13.11.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಡಿ. ವಕೀಲರಿಂದಃ**

**5.** ನಿಡಿ-1 ರ ದಾಖಲೆಯ ಬಗ್ಗೆ ನಿಮ್ಮ ವಕೀಲರಿಗೆ ತಿಳಿಸಿದ್ದೀರ ಎಂದರೆ ಸಾಕ್ಷಿಯು ಅದೇ ಬೇರೆ ವ್ಯವಹಾರ ಎಂದು ನುಡಿಯುತ್ತಾರೆ. ನಿಡಿ-1 ರಂತೆ ದರ್ಶನ್ ರವರಿಂದ ನಿವೇಶನ ಮತ್ತು ಮನೆಯ ಸಂಬಂಧ ಕ್ರಯಪತ್ರ ಬರೆಸಿಕೊಂಡಿದ್ದೀರ ಎಂದರೆ ಸಾಕ್ಷಿಯು ಅವರು ನನಗೆ ಹಣ ವಾಪಸ್ಸು ಕೊಟ್ಟಿದ್ದು, ಆ ವ್ಯವಹಾರ ಮುಗಿದಿದೆ ಎಂದು ನುಡಿಯುತ್ತಾರೆ. ಸದರಿ ವ್ಯವಹಾರ ಮುಗಿದಿದೆ ಎಂದು ಶರಾ ಬರೆಸಿಕೊಂಡಿದ್ದೀನ ಎಂದು ನನಗೆ ನೆನಪಿಲ್ಲ. ದರ್ಶನ್ ರವರ ತಾಯಿ ನಿವೇಶನ ಮತ್ತು ಮನೆ ತಮಗೆ ಇರಲಿ ಎಂದು ಹೇಳಿದ ಕಾರಣ ಅದನ್ನು ನನಗೆ ಮಾರಾಟ ಮಾಡಿಲ್ಲ. ಸದರಿ ಕರಾರಿನ ವ್ಯವಹಾರ ಮುಗಿದು ಎಷ್ಟು ವರ್ಷವಾಗಿದೆ ಎಂದು ನನಗೆ ನೆನಪಿಲ್ಲ. ದರ್ಶನ್ ಎನ್ನುವವರು ಆರೋಪಿಯ ಅಕ್ಕನ ಮಗ ಎಂದರೆ ನನಗೆ ಗೊತ್ತಿಲ್ಲ. ನಿಡಿ-1 ರ ಕರಾರು ಮಾಡಿಕೊಳ್ಳುವಾಗ ದರ್ಶನ್ ರವರ ಮೂಲಕ ಆರೋಪಿಯ ಚೆಕ್ ನ್ನು ಭದ್ರತೆಗಾಗಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ದರ್ಶನ್ ರವರು ನಗದು ರೂಪದಲ್ಲೇ ನನಗೆ ಹಣ ವಾಪಸ್ಸು ಕೊಟ್ಟರು. ದರ್ಶನ್ ರವರು ನನಗೆ ಮನೆ ಮತ್ತು ನಿವೇಶನ ಮಾರಾಟ ಮಾಡದ ಕಾರಣ ನಿಪಿ-1 ಚೆಕ್ ನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**6.** ನಿಪಿ-1 ರಲ್ಲಿ ಬರವಣಿಗೆಗಳನ್ನು ಬರೆದುಕೊಂಡು ಬಂದು ಆರೋಪಿ ನನ್ನ ಸಮಕ್ಷಮ ಸಹಿ ಮಾಡಿ ಕೊಟ್ಟಿದ್ದಾರೆ. 2020 ರ ನವೆಂಬರ್ ಅಥವಾ ಡಿಸೆಂಬರ್ ತಿಂಗಳಲ್ಲಿ ಆರೋಪಿ ನನಗೆ ನಿಪಿ-1 ರ ಚೆಕ್ ನ್ನು ಕೊಟ್ಟಿದ್ದಿರಬಹುದು. ಈ ವಿಚಾರವನ್ನು ದೂರು ಮತ್ತು ನೋಟೀಸ್ ನಲ್ಲಿ ಬರೆಸಿಲ್ಲ. ಆರೋಪಿ ನನಗೆ ನಿಪಿ-1 ರ ಚೆಕ್ ನ್ನು ಕೊಟ್ಟ ಕಾಲಕ್ಕೆ ನಾನು ದರ್ಶನ್ ರವರೊಂದಿಗೆ ಕರಾರು ಬರೆಸಿಕೊಂಡಿದ್ದೆನ ಎಂದು ನನಗೆ ನೆನಪಿಲ್ಲ. ನಿಪಿ-1 ರ ಚೆಕ್ ನ್ನು ನನಗೆ ಕೊಟ್ಟ ದಿನ ನನ್ನ ಹಾಗೂ ಆರೋಪಿಯ ನಡುವೆ ಬೇರೆ ಯಾವುದಾದರು ಬರವಣಿಗೆ ಆಗಿದೆಯಾ ಎಂದು ನನಗೆ ನೆನಪಿಲ್ಲ. ನನ್ನ ಹಾಗೂ ಆರೋಪಿಯ ನಡುವೆ ಹಣಕಾಸಿನ ವ್ಯವಹಾರ ಆಗುವಾಗ ನನ್ನ ತಂದೆ ಹಾಜರಿರಲಿಲ್ಲ. ನಿಪಿ-7 ಮತ್ತು 8 ರ ದಾಖಲೆ ನನ್ನ ತಂದೆಗೆ ಸಂಬಂಧಪಟ್ಟದ್ದು ಎಂದರೆ ಸರಿ. ಆರೋಪಿಯಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಅವರ ವಿರುದ್ಧ ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.